International Journal of Kannada Research
www.kannadajournal.com

ISSN: 2454–5813
IJKR 2023; 9(2): 179-182
© 2023 IJKR
www.kannadajournal.com
Received: 11-05-2023
Accepted: 15-06-2023

**ಸೇಸುನಾಥನ್ ಐ**
ಕನ್ನಡ ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಒಂಟಿಕೊಪ್ಪಲು, ಮೈಸೂರು, ಕರ್ನಾಟಕ, ಭಾರತ

**Corresponding Author:**
**ಸೇಸುನಾಥನ್ ಐ**
ಕನ್ನಡ ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಒಂಟಿಕೊಪ್ಪಲು, ಮೈಸೂರು, ಕರ್ನಾಟಕ, ಭಾರತ

# ಮಾರ್ಟಳ್ಳಿಯ ಶಾಸನ ಮತ್ತು ವೀರಗಲ್ಲುಗಳು – ಒಂದು ಅಧ್ಯಯನ

**ಸೇಸುನಾಥನ್ ಐ**

## ಪೀಠಿಕೆ

ಇತಿಹಾಸದ ಮೂಲಕ ನಮ್ಮ ಪೂರ್ವಿಕರ ಬದುಕು ನಮಗೆ ತಿಳಿಯುತ್ತದೆ. ಚರಿತ್ರೆಯನ್ನು ಅರಿಯಲು ಶಾಸನಗಳು ನೆರವಾಗುತ್ತದೆ. ಹಿಂದಿನ ಕಾಲದ ಜನರ ಬದುಕಿನ ಬಹುತೇಕ ಮಗ್ಗುಲುಗಳ ವಿವರಗಳನ್ನು ಶಾಸನಗಳು ಲಿಖಿತವಾಗಿ ದಾಖಲಿಸಿವೆ. 'ಇತಿಹಾಸದ ಪ್ರಮಾಣಭೂತವಾದ ಪುನರ್‌ನಿರ್ಮಾಣಕ್ಕೆ ಇರುವ ಅತಿ ಮುಖ್ಯವಾದ ಆಧಾರಗಳೆಂದರೆ ಶಾಸನಗಳು.'[1] ಆದ್ದರಿಂದ ಶಾಸನಗಳು ಇತರ ಆಕರಗಳಿಗಿಂತ ಅಧಿಕೃತತೆಯನ್ನು ಪಡೆದುಕೊಳ್ಳುತ್ತವೆ. ಈ ಹಿನ್ನೆಲೆಯಲ್ಲಿ ಶಾಸನಗಳ ಅಧ್ಯಯನ ಅಪೇಕ್ಷಣೀಯವಾಗಿದೆ.
'ಶಾಸನ' ಎಂಬುದು ಸಂಸ್ಕೃತ ಪದವಾಗಿದ್ದು, ಇದನ್ನು ಕಾನೂನು ಎಂಬ ಅರ್ಥದಲ್ಲಿ ಈಗಲೂ ಬಳಸಲಾಗುತ್ತದೆ. ಶಾಸನ ಪದ 'ಶಾಶ್' ಎಂಬ ಧಾತುವಿನಿಂದ ಬಂದಿದೆ. ಶಾಶ್ ಎಂಬ ಧಾತುವಿನಿಂದ ನಿಷ್ಪನ್ನವಾದ ಶಾಸನ ಪದಕ್ಕೆ ಆಜ್ಞಾಪಿಸು, ಶಿಕ್ಷಿಸು, ನಿಯಂತ್ರಿಸು ಎಂಬ ಅರ್ಥಗಳಿವೆ. 'ಕಾನೂನುಗಳನ್ನು ಜನರಿಗೆ ಪ್ರಕಟಪಡಿಸುವ ಬರಹಗಳು ಶಾಸನಗಳು. ರಾಜನೇ ಆಗಲಿ ಅಥವಾ ಬೇರೆಯವರು ಯಾರೇ ಆಗಲಿ – ಅವರು ದಾನವನ್ನು ಕೊಟ್ಟಾಗ, ಆ ದಾನದ ವಿಷಯದಲ್ಲಿ ಕೆಲವು ನಿಯಮಗಳನ್ನು ಹಾಕಿ, ಆ ನಿಯಮಗಳನ್ನು ಯಾರೂ ಉಲ್ಲಂಘಿಸಕೂಡದೆಂದೂ, ಎಲ್ಲರೂ ಆ ದಾನವನ್ನು ಕಾಪಾಡಿಕೊಂಡು ಬರಬೇಕೆಂದೂ ಕೇಳಿಕೊಳ್ಳುತ್ತಿದ್ದರು ಅಥವಾ ಆಜ್ಞೆ ಮಾಡುತ್ತಿದ್ದರು.'[2] ಶಾಸನಗಳು ವಾಸ್ತವ ವಿಷಯಗಳ ದಾಖಲೆಗಳಾದ್ದರಿಂದ ಅವುಗಳಲ್ಲಿ ದೊರಕುವ ವಿಷಯ ಸಂಪತ್ತು ಅಘಾತವಾದದ್ದು.

ಶಾಸನಕ್ಕೆ ಇಂಗ್ಲಿಷ್‌ನಲ್ಲಿ Inscription ಎಂಬ ಸಂವಾದಿ ಪದವಿದೆ. Inscribe ಎಂದರೆ ಕೆತ್ತು ಎಂದರ್ಥ. Inscription ಎಂದರೆ ಕೆತ್ತಲ್ಪಟ್ಟದ್ದು ಅಥವಾ ಕೊರಿಯಲ್ಪಟ್ಟದ್ದು ಎಂದು ಅರ್ಥವಾಗುತ್ತದೆ. ಬ್ರಿಟಾನಿಕ ವಿಶ್ವಕೋಶದಲ್ಲಿ Inscription ಬಗ್ಗೆ ಹೀಗೆ ವಿವರಿಸಲಾಗಿದೆ – 'ತಾಳೆಗರಿ, ಭೂರ್ಜ್ವಪತ್ರ, ಕಾಗದ ಮುಂತಾದವುಗಳ ಮೇಲೆ ಕಂಡುಬರುವ ಬರಹಗಳನ್ನು ಬಿಟ್ಟು, ಬಹುಕಾಲ ಉಳಿಯುವ ಸಾಮಗ್ರಿಯ ಮೇಲೆ ಕೆತ್ತಿರುವ ಬರಹಗಳನ್ನು ಶಾಸನಗಳೆಂದು ಸ್ಥೂಲವಾಗಿ ಕರೆಯಬಹುದು.'[3]
ಭಾರತದಲ್ಲಿ ತಮಿಳುನಾಡನ್ನು ಬಿಟ್ಟರೆ ಅತಿ ಹೆಚ್ಚು ಶಾಸನಗಳು ದೊರಕಿರುವುದು ಕರ್ನಾಟಕದಲ್ಲೇ. ಇಲ್ಲಿಯವರೆಗೂ 20,000 ಕ್ಕೂ ಹೆಚ್ಚು ಶಾಸನಗಳು ಕರ್ನಾಟಕದಲ್ಲಿ ದೊರಕಿವೆ. ಈ ಶಾಸನಗಳಲ್ಲಿ ಬಹುತೇಕವು ಬಂಡೆಗಳು, ಕಲ್ಲುಗಳು, ದೇವಸ್ಥಾನದ ಗೋಡೆಗಳು, ಕಂಬಗಳು ಮತ್ತು ಲೋಹಗಳ ಮೇಲೆ ಕಂಡುಬರುತ್ತವೆ. ಕೊಳ್ಳೇಗಾಲ ಮತ್ತು ಹನೂರು ತಾಲೂಕುಗಳಲ್ಲಿ ಗಂಗರು, ಚೋಳರು, ಹೊಯ್ಸಳರು, ವಿಜಯನಗರ ಅರಸರು, ಮೈಸೂರು ಒಡೆಯರು ಮತ್ತು ಪಾಳೆಯಗಾರರ ಕಾಲದ ಹಲವು ಶಾಸನಗಳು ದೊರಕಿದ್ದು, ಈ ಭಾಗದ ಚರಿತ್ರೆಯನ್ನು ಅರಿಯುವಲ್ಲಿ ನೆರವಾಗಿವೆ.

## ಗ್ರಾಮದ ಪರಿಚಯ

ಮಾರ್ಟಳ್ಳಿಯು ದಕ್ಷಿಣ ಕರ್ನಾಟಕದ ಗಡಿಯಲ್ಲಿ ಗಿರಿ ಶ್ರೇಣಿಗಳ ಮಧ್ಯೆ ನೆಲೆಗೊಂಡಿರುವ ಒಂದು ಗ್ರಾಮವಾಗಿದ್ದು, ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನಲ್ಲಿದೆ. ಇದು ಜಿಲ್ಲೆಗೆ ಅತಿ ದೊಡ್ಡ ಗ್ರಾಮ ಪಂಚಾಯಿತಿಯೂ ಆಗಿದೆ. ಪ್ರಾಚೀನ ಕಾಲದಿಂದಲೂ ಜನವಸತಿಯ ನೆಲೆಯಾಗಿದ್ದ ಈ ಪ್ರದೇಶ, ಕಳೆದ ಸಹಸ್ರಮಾನದ ಹೊತ್ತಿಗೆ ಪಾಳೆಯಗಾರರ ಆಡಳಿತದಲ್ಲಿ ಕೋಟೆ–ಕೊತ್ತಳಗಳೊಂದಿಗೆ ವೈಭವಯುತವಾಗಿ ಮೆರೆದಿತ್ತು. ಕಾಲಾನಂತರದಲ್ಲಿ ಅನ್ಯರ ದಾಳಿಗಳಿಗೆ ತುತ್ತಾಗಿ, ಊರಿಗೆ ಊರೇ

ಭಾಗಶಃ ನಾಶವಾಯಿತು. ಕಾಲ ಕ್ರಮೇಣ ಊರಿನ ಅನೇಕ ಭಾಗಗಳು ಕಾಡಾದವು; ಜನವಸತಿಯ ಪ್ರದೇಶ ಕಿರಿದಾಯಿತು. ಮಾರ್ಟಳ್ಳಿಯಲ್ಲಿ ಇದುವರೆಗೆ 4 ಶಾಸನಗಳು ದೊರೆತಿದ್ದು, ಈ ಪೈಕಿ ಊರಿನಲ್ಲಿರುವ ಮೂರು ಶಾಸನಗಳು ಎಫಿಗ್ರಾಫಿಯ ಕರ್ನಾಟಕ ಸಂಪುಟ 4 ರಲ್ಲಿ ದಾಖಲಾಗಿವೆ. ಕಾಡಿನಲ್ಲಿ ಒಂದು ಅಪ್ರಕಟಿತ ಶಾಸನವಿದೆ.

**ಹಳೇ ಮಾರ್ಟಳ್ಳಿ ಶಾಸನ**

ಮಾರ್ಟಳ್ಳಿಯ ಹಳೇ ಗ್ರಾಮದಲ್ಲಿ (ಈಗ ಹಳೇ ಮಾರ್ಟಳ್ಳಿ) ವೀರಭದ್ರ ಎಂದು ಕರೆಯುತ್ತಿರುವ ಕಲ್ಲಿನ ಮೇಲೆ ಈ ಶಾಸನ ಕಂಡು ಬರುತ್ತದೆ.[4] ಇದೊಂದು ದಾನ ಶಾಸನವಾಗಿದೆ.

| ಬಲಪಾರ್ಶ್ವ | ಎಡಪಾರ್ಶ್ವ |
|---|---|
| ವೀರ ಚಿಕಾ<br>ಣಗೌನ ಮ<br>ಗ ಸಿದ್ದಣ<br>ಗೌಡನು<br>ತಂಮಾ[ಳ್ವ]ರು<br>[ವಿ]ರಾಂಮ<br>ರಿಗೆ ಪುಣ್ಯ<br>ವಗಲಿ<br>ಯೆಂಧು | .ಭರಿ.<br>ಧ ಜಲ<br>.ನಯಾ |

ಇದರಲ್ಲಿ ವೀರ ಚಿಕ್ಕಣಗೌಡನ ಮಗ ಸಿದ್ದಣಗೌಡನು ತನ್ನನ್ನು ಆಳುವ ವಿರಾಮ್ಮರಿಗೆ ಪುಣ್ಯವಾಗಲೆಂದು ಅಕ್ಕಸಾಲಿ ಮಾದಣ್ಣನಿಗೆ ನೀಡಿದ (ಕೊಡುಗೆಯ) ಬಗ್ಗೆ ಉಲ್ಲೇಖಿಸಲಾಗಿದೆ. ಈ ಶಾಸನದ ಕಾಲ ತಿಳಿದು ಬಂದಿಲ್ಲವಾದರೂ, ಪಾಳೆಯಗಾರರ ಕಾಲದಲ್ಲಿ ಸಿದ್ದಣಗೌಡನು ಮಾರ್ಟಳ್ಳಿ ಗ್ರಾಮದ ಗೌಂಡನಾಗಿದ್ದನು ಮತ್ತು ವಿರಾಮ್ಮ ಎಂಬಾತನ ಆಳ್ವಿಕೆಗೆ ಒಳಪಟ್ಟಿದ್ದನು ಎಂಬುದು ಸ್ಪಷ್ಟವಾಗುತ್ತದೆ.

**ಸುಳ್ವಾಡಿಯ ಶಾಸನಗಳು**

ಇಲ್ಲಿ ಎರಡು ಶಾಸನಗಳಿವೆ. ಸುಳ್ವಾಡಿಯ ಬ್ರಹ್ಮೇಶ್ವರ ದೇವಸ್ಥಾನದ ಪ್ರಾಕಾರದಲ್ಲಿ ಈ ಒಂದು ಶಾಸನಗಲ್ಲಿದೆ.[5] ಇದರಲ್ಲಿ ಮಾರ್ಟಳ್ಳಿ ಗ್ರಾಮದ ಪ್ರಾಚೀನತೆ ಮತ್ತು 'ಮಾರ್ಟಳ್ಳಿ' ಹೆಸರಿನ ನಿಷ್ಪತ್ತಿ ಕುರಿತು ಮಾಹಿತಿ ನೀಡಲಾಗಿದೆ. ಇದೂ ಕೂಡ ದಾನ ಶಾಸನವಾಗಿದೆ. ಶಾಸನಗಲ್ಲಿನ ತಳ ಭಾಗವು ಗಾರೆಗೆಚ್ಚಿನಲ್ಲಿ ಹುದುಗಿಹೋಗಿದ್ದು, ಶಾಸನದ ಉಳಿದ ಭಾಗವನ್ನು ಓದುವುದು ಅಸಾಧ್ಯವಾಗಿದೆ. ಈ ಶಾಸನ ಬ್ರಹ್ಮೇಶ್ವರ ದೇವಸ್ಥಾನದ ನಿರ್ಮಾತೃ, ಅದರ ಕಾಲ ಮತ್ತು ಆಗಿನ ಆಳರಸರ ವಿವರಗಳನ್ನು ಒಳಗೊಂಡಿದೆ.

ಶುಭಮಸ್ತು ಸ್ವಸ್ತಿ ಶ್ರೀ ಜಯಾದ್ಬುದಯಸಾಲಿವಾಹನಶಕವರುಷ 15
02 ಸಂದ ವರ್ತಮಾನವಾಗಿ ನಡೆದುಬಹ ವಿಕ್ರಮಸಂವತ್ಸರದ ಶ್ರಾವಣ ಶ್ಧು 5 ಲ್ಲು
ಶ್ರೀಮಂನ್ಮಹಾದೇವಶಿಖಾಮಣಿಪ್ಪ ಬ್ರಂಹ್ಮದೇವರ ನಿರೂಪದಿಂ ತಂಮ
ಡಿಮಾರಯ್ಯನ ಮಗನು ಆಚಯ್ಯನು ಮೊರಟಹಳಿಯ ನಾಯ್ಕರು ಪಾಲೆಯನಾ
ಯ್ಯರಿಗೆ ಪುಣ್ಯವಾಗಬೇಕೆಂದು ಬ್ರಂಹದೇವರ ಗುಡಿಯನು ಕಟ್ಟಿಸಿ ದೇ[ವ]....
...... ಯ.....

ಸುಳ್ವಾಡಿಯನ್ನು ಶಾಸನದಲ್ಲಿ 'ಸೂಲವಾಡಿ' ಎಂದು ಉಲ್ಲೇಖಿಸಲಾಗಿದೆ. ಈ ಶಾಸನವು, ಶಾಲಿವಾಹನ ಶಕ 1502 ವಿಕ್ರಮ ಸಂವತ್ಸರದ ಶ್ರಾವಣ ಶ್ಧು 5 ರಂದು (ಕ್ರಿ.ಶ. 1580 ಜುಲೈ 17) ತಮ್ಮಡಿ ಮಾರಯ್ಯನ ಮಗ ಆಚಯ್ಯನು ಮೊರಟಹಳಿಯ ನಾಯಕರಾದ ಪಾಳೆಯನಾಯಕರಿಗೆ ಪುಣ್ಯವಾಗಲೆಂದು ಸುಳ್ವಾಡಿಯ ಪರಮೇಶ್ವರ ಗುಡಿ ಕಟ್ಟಿಸಿರುವುದನ್ನು ತಿಳಿಸುತ್ತದೆ.

ಈ ಶಾಸನದಲ್ಲಿ ಮಾರ್ಟಳ್ಳಿಯನ್ನು 'ಮೊರಟಹಳಿ' ಎಂದು ಉಲ್ಲೇಖಿಸಲಾಗಿದ್ದು, ಕಾಲಾನಂತರದಲ್ಲಿ ಅದು 'ಮಾರ್ಟಳ್ಳಿ' ಎಂದು ರೂಪಾಂತರಗೊಂಡಿರುವುದು ಸ್ಪಷ್ಟವಾಗುತ್ತದೆ. ಆಗ ಮಾರ್ಟಳ್ಳಿ ಕೋಟೆಯಲ್ಲಿ ಪಾಳೆಯನಾಯಕ ಎಂಬ ಪಾಳೆಯಗಾರನಿದ್ದು, ಈ ಪ್ರದೇಶದ ಆಡಳಿತವನ್ನು ನೋಡಿಕೊಳ್ಳುತ್ತಿದ್ದನು ಎಂದು ತಿಳಿದು ಬರುತ್ತದೆ. ಬ್ರಹ್ಮೇಶ್ವರ ಗುಡಿ ಸುಸ್ಥಿತಿಯಲ್ಲಿದ್ದು, ಇದು ಮಾರ್ಟಳ್ಳಿಯ ಅತ್ಯಂತ ಪ್ರಾಚೀನ ದೇವಾಲಯವಾಗಿದೆ. ಇಂದಿಗೂ ಇಲ್ಲಿ ನಿತ್ಯಪೂಜೆ ನಡೆಯುತ್ತದೆ. ಸ್ಥಳೀಯರು ಮಾತ್ರವಲ್ಲದೆ, ದೂರದ ಊರುಗಳಿಂದಲೂ ಭಕ್ತರು ಇಲ್ಲಿಗೆ ಬಂದು ಪೂಜೆ ಸಲ್ಲಿಸಿ ಹೋಗುತ್ತಾರೆ.

ಸುಳ್ವಾಡಿಯ ಬ್ರಹ್ಮೇಶ್ವರ ದೇವಸ್ಥಾನದ ಮುಂದಿರುವ ಗರುಡಗಂಬದ ಮೇಲೆ ಇನ್ನೊಂದು ಶಾಸನವಿದೆ. ಇದು 17ನೇ ಶತಮಾನದ ತಮಿಳು ಗ್ರಂಥ ಲಿಪಿಯಲ್ಲಿದೆ. ಶಾಸನದ ದಿನಾಂಕವನ್ನು ಪ್ರಜೋತ್ಪತ್ತಿ ವರ್ಷ ಕಾರ್ತಿಕ ಮಾಸ 28 ನೇ ತಾರೀಖು ಎಂದಷ್ಟೇ ಉಲ್ಲೇಖಿಸಲಾಗಿದ್ದು, ಕಾಲದ ಬಗ್ಗೆ ನಿಖರತೆ ಇಲ್ಲ.

ಪಿರಚೋಪತಿವರುಷಮ್ ಕಾರ್ ತಿಗ್ಗೆ
28 ಕುಮರಕಟ್ಟಿ ಮುದಲಿಯಾರ್ [ಪಿರಕಾಡಗ]ನಿ
ಲಮ್ ಚ್ಚಿನ್ನ ವಸನ್ತ ರಾಯಗ್ಗ ವುಣ್ಣರ್ ಪಾರಿಪತ್ತಿಯ
ತಿಲ್ ನರಸರಾಚಾಮ್ ಗಯ್ದ್ ಪಣತ್ತಿಲ್ ತಲಕಮ್ಬುಮ್ ವಲ್

ಈ ಶಾಸನವು ಪ್ರಜೋತ್ಪತ್ತಿ ವರ್ಷ ಕಾರ್ತಿಕ ಮಾಸ 28ರಂದು ಚಿನ್ನವಸಂತರಾಯ ಗಾವುಂಡನ ಮೇಲುಸ್ತುವಾರಿಯಲ್ಲಿ, ನರಸರಾಯ ಹಣದಿಂದ, ಕುಮರಕಟ್ಟಿ ಮುದಲಿಯಾರ್ ಎಂಬಾತ ಈ ತಲಕಂಬವನ್ನು ಸ್ಥಾಪಿಸಿದನು ಎಂದು ತಿಳಿಸುತ್ತದೆ. ಈ ಕಂಬವನ್ನು ನಂದಿಕಂಬ ಎಂದೂ ಕರೆಯುತ್ತಾರೆ. 17ನೇ ಶತಮಾನದಲ್ಲಿ ಸುಳ್ವಾಡಿಯಲ್ಲಿ ಚಿನ್ನವಸಂತರಾಯ ಗಾವುಂಡನು ಗಾವುಂಡಗೈಯುತ್ತಿದ್ದನು ಮತ್ತು ಕುಮರಕಟ್ಟಿ ಮೊದಲಿಯಾರ್ ಆತನ ಅಧಿಕಾರಿಯಾಗಿ ಆಳ್ವಿಕೆ ನಡೆಸುತ್ತಿದ್ದನು ಎಂಬುದು ಈ ಶಾಸನದಿಂದ ತಿಳಿದು ಬರುತ್ತದೆ.

**ಅರಣ್ಯದಲ್ಲಿನ ಅಪ್ರಕಟಿತ ತಮಿಳು ಶಾಸನ**

ಇತ್ತೀಚೆಗೆ ವಡ್ಡರದೊಡ್ಡಿಯಿಂದ ಪಶ್ಚಿಮಕ್ಕೆ 3 ಕಿಮೀ ದೂರದಲ್ಲಿ, ಮೂಲೆಮಡು ಅರಣ್ಯದಲ್ಲಿ, 4 ಅಡಿ ಉದ್ದ 3 ಅಡಿ ಅಗಲದ ಒಂದು ಶಾಸನಗಲ್ಲು ಪತ್ತೆಯಾಗಿದೆ. ಇದು ತಮಿಳು ಗ್ರಂಥ ಲಿಪಿಯಲ್ಲಿದೆ. ಆದರೆ ಆನೆ ಮುಂತಾದ ಕಾಡುಪ್ರಾಣಿಗಳ ಕಾಲ್ತುಳಿತ ಮತ್ತು ಗೋಪಾಲಕರ ದಾಳಿಗೆ ಸಿಕ್ಕಿ ಈ ಶಾಸನಗಲ್ಲು ಶಿಥಿಲವಾಗಿದೆ. ಈ ಶಾಸನಗಲ್ಲಿನ ವಿವರಗಳು ಇದುವರೆಗೂ ಎಲ್ಲೂ ದಾಖಲಾಗದೆ, ಇದು ಈವರೆಗೂ ಅಪ್ರಕಟಿತ ಶಾಸನವಾಗಿಯೇ ಉಳಿದಿದೆ.

ಆದರೂ ಶಾಸನದಲ್ಲಿ ಕಂಡು ಬರುವ ತಮಿಳು ಗ್ರಂಥ ಲಿಪಿಯ ಲಕ್ಷಣವನ್ನು ಗಮನಿಸಿದಾಗ, ಇದು ಕ್ರಿ.ಶ. 11 ರಿಂದ 14ನೇ ಶತಮಾನದ ನಡುವಿನ ಕಾಲದ್ದಿರಬೇಕು ಎಂದು ತೋರುತ್ತದೆ. ಇಲ್ಲಿಂದ 3 ಕಿ.ಮೀ ದೂರದಲ್ಲಿರುವ ಕೌದಳ್ಳಿಯಲ್ಲಿ ಹೊಯ್ಸಳರ ಕಾಲದ ತಮಿಳು ಶಾಸನಗಳು ಲಭಿಸಿರುವುದು ಇದಕ್ಕೆ ಪುಷ್ಠಿ

ನೀಡುತ್ತದೆ. ಈ ಶಾಸನದ ಅಕ್ಕಪಕ್ಕದಲ್ಲಿ ಶಿಥಿಲವಾದ ಶಿಲಾಮೂರ್ತಿಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿರುವುದು ಕಂಡುಬರುತ್ತದೆ.

**ವೀರಗಲ್ಲು ಮತ್ತು ಮಾಸ್ತಿಕಲ್ಲುಗಳು**

ಭಾರತೀಯ ಸಂಸ್ಕೃತಿಯಲ್ಲಿ ವೀರಪೂಜೆ ಪ್ರಮುಖವಾಗಿದ್ದು, ಇದರಿಂದ ವೀರಗಲ್ಲು ಪರಂಪರೆ ಆರಂಭವಾಯಿತು. ವೀರನಾದವನು ಯುದ್ಧ ಭೂಮಿಯಿಂದ ಓಡಿ ಹೋಗಬಾರದು; ವೀರಮರಣವನ್ನಪ್ಪಿದರೆ ವೀರಸ್ವರ್ಗ ಸಿಗುತ್ತದೆ ಎಂಬ ನಂಬಿಕೆ ರಾಜಪ್ರಭುತ್ವದ ಕಾಲದಲ್ಲಿ ಸಾಮಾನ್ಯವಾಗಿತ್ತು. ವೀರ ಯಾವ ಕಾರಣಕ್ಕಾಗಿ ಭೂಮಿಯ ಮೇಲೆ ಹೋರಾಡಿದ ಎನ್ನುವುದನ್ನು ವೀರಗಲ್ಲು ತಿಳಿಸುತ್ತದೆ. ಯುದ್ಧದಲ್ಲಿ ಮಡಿದ ವೀರರನ್ನು ದೇವತಾ ಸ್ತ್ರೀಯರು ಬಂದು ಎತ್ತಿಕೊಂಡು ಹೋಗುತ್ತಾರೆ ಎಂಬ ವಿವರಣೆಯಲ್ಲಿ ದೈವತ್ವದ ಕಲ್ಪನೆ ಇದೆ.

'ದೇಹವೆನ್ನುವುದು ಅಶಾಶ್ವತವಾದದು, ಕೀರ್ತಿಯು ಚಿರಸ್ಥಾಯಿಯಾದುದು. ಅಶಾಶ್ವತವಾದ ದೇಹವು ಹೋದರೂ ಹೋಗಲಿ, ಶಾಶ್ವತವಾದ ಕೀರ್ತಿಯನ್ನು ಸಂಪಾದಿಸಬೇಕೆಂಬುದು ಜನರ ಬಯಕೆಯಾಗಿತ್ತು. ಆ ಕಾಲದಲ್ಲಿ ಒಬ್ಬ ದೊಡ್ಡ ವಿದ್ವಾಂಸನ ಹೆಸರೋ, ಅಥವಾ ಒಬ್ಬ ಮಹಾದಾನಿಯ ಹೆಸರೋ ಬಹುವಾಗಿ ಪ್ರಸಾರವಾಗುತ್ತಿತ್ತೋ ಗೊತ್ತಿಲ್ಲ. ಆದರೆ ಯುದ್ಧದಲ್ಲಿ ಪ್ರಾಣತ್ಯಾಗವನ್ನು ಮಾಡಿದ ವೀರನ ಹೆಸರು ಈ ಲೋಕದಲ್ಲಿ ಮಾತ್ರವಲ್ಲ, ಪರಲೋಕದಲ್ಲಿಯೂ ಪಡೆಮಾತಾಗುತ್ತಿತ್ತು.'[7] ವೀರಗಲ್ಲು ಎಂಬುದು ಕಲ್ಲಿನ ಸ್ಮಾರಕವಾಗಿದೆ. ಪೂರ್ವದಲ್ಲಿ ಒಬ್ಬ ವ್ಯಕ್ತಿಯು ತನ್ನ ಹಳ್ಳಿ ಅಥವಾ ರಾಜ್ಯವನ್ನು ಉಳಿಸಲು ಹೋರಾಡಿ ಮಡಿದಾಗ, ಆತನ ಸ್ಮರಣಾರ್ಥ ಅಥವಾ ಗೌರವಾರ್ಥವಾಗಿ ನಿರ್ಮಾಣ ಮಾಡುತ್ತಿದ್ದ ಕಲ್ಲುಗಳೇ ವೀರಗಲ್ಲುಗಳು. ಊರಿನ ಹಿತಕ್ಕಾಗಿ, ದುಷ್ಟ ಸಂಹಾರಕ್ಕಾಗಿ, ಸ್ವಾಮಿನಿಷ್ಠೆಯಿಂದ ಹೋರಾಡಿ, ಮಡಿದ ವೀರಪುರುಷನ ಕುರುಹಾಗಿ ವೀರಗಲ್ಲುಗಳನ್ನು ನಿಲ್ಲಿಸುತ್ತಿದ್ದರು. ಕರ್ನಾಟಕದ ಅನೇಕ ಹಳ್ಳಿಗಳಲ್ಲಿ ವಿವಿಧ ರೀತಿಯ ವೀರಗಲ್ಲುಗಳು ಕಂಡುಬರುತ್ತವೆ.

'ವೀರನ ಶೌರ್ಯ ಪರಾಕ್ರಮಗಳನ್ನು ಉಲ್ಲೇಖಿಸುವ ವೀರಗಲ್ಲುಗಳಲ್ಲಿ ಸಾಮಾನ್ಯವಾಗಿ ಮೂರು ಹಂತಗಳನ್ನು ಕೆತ್ತಿರುತ್ತಾರೆ. ಕೆಳಗಿನ ಹಂತದಲ್ಲಿ ಅವನ ಹೋರಾಟದ ಚಿತ್ರವಿರುತ್ತದೆ. ಮಧ್ಯದ ಹಂತದಲ್ಲಿ ಅವನನ್ನು ಕೈಲಾಸಕ್ಕೆ ದೇವತಾ ಸ್ತ್ರೀಯರೂ ಕರೆದೊಯ್ಯುತ್ತಿರುವ, ಮೇಲಿನ ಹಂತದಲ್ಲಿ ಅವನು ಶಿವನ ಸಾನಿಧ್ಯದಲ್ಲಿರುವುದೂ ಚಿತ್ರಿತವಾಗಿರುತ್ತದೆ.'[8] ವೀರಗಲ್ಲುಗಳ ಮೇಲೆ ಕಂಡುಬರುವ ಚಿತ್ರಗಳಲ್ಲಿ ಆ ಕಾಲದ ವೇಷ-ಭೂಷಣಗಳನ್ನೂ, ಯುದ್ಧದಲ್ಲಿ ಬಳಸುತ್ತಿದ್ದ ಆಯುಧಗಳನ್ನೂ ಗುರುತಿಸಬಹುದಾಗಿದೆ.

'ಮಾಸ್ತಿ ಅಥವಾ ಮಹಾಸತಿ ಕಲ್ಲುಗಳೆಂದರೆ ಮೃತ್ಯುವಶನಾದ ಪತಿಯನ್ನು ಹಿಂಬಾಲಿಸಿ ಸಹಗಮನ ಮಾಡಿದ ಮಹಾಸತಿಯ ಸ್ಮಾರಕಕ್ಕಾಗಿ ನಿಲ್ಲಿಸಿದವುಗಳು.'[9] ಸತಿ ಸಹಗಮನ ಪದ್ಧತಿ ಸಾರ್ವತ್ರಿಕವಾಗಿರಲಿಲ್ಲವಾದರೂ, ಪತಿಯೇ ಪರದೈವ ಎಂದು ಭಾವಿಸಿದ ಹೆಣ್ಣು ಪತಿಯ ಮರಣವನ್ನು ಸಹಿಸಲಾರದೆ, ಆತನನ್ನು ಹಿಂಬಾಲಿಸಿ ಸಹಗಮನವನ್ನು ಮಾಡಿದ ಪ್ರಸಂಗಗಳೇ ಹೆಚ್ಚು. 'ಕನ್ನಡ ನಾಡಿನಲ್ಲಿ ಕಂಡುಬರುವ ಮಹಾಸತಿಯ ಕಲ್ಲುಗಳು, ಸ್ವಯಂ ಸಂತೋಷದಿಂದ ಪತಿಯನ್ನು ಹಿಂಬಾಲಿಸಿದ ಮಹಾಸಾಧ್ವಿಯರ ಸ್ಮರಣೆಗಾಗಿ ನೆಟ್ಟವುಗಳು.'[10]

ಮಾರ್ಟಳ್ಳಿಯಲ್ಲಿ ಇದುವರೆಗೆ ಹತ್ತಕ್ಕೂ ಹೆಚ್ಚು ವೀರಗಲ್ಲುಗಳು ಮತ್ತು ಎರಡು ಮಾಸ್ತಿಕಲ್ಲುಗಳು ದೊರೆತಿವೆ. ಇವುಗಳಲ್ಲಿ ಕೆಲವು ಊರಿನಲ್ಲಿದ್ದರೆ, ಮತ್ತೆ ಕೆಲವು ಅರಣ್ಯ ಪ್ರದೇಶದಲ್ಲಿವೆ. ಈ ವೀರಗಲ್ಲುಗಳು ಅಂದಿನ ರಾಜಕೀಯ, ಸಾಮಾಜಿಕ, ಧಾರ್ಮಿಕ ಆರ್ಥಿಕ ಸ್ವರೂಪವನ್ನು ಅರ್ಥೈಸಿಕೊಳ್ಳಲು ನೆರವಾಗುತ್ತದೆ. ಆದರೆ ಇಲ್ಲಿರುವ ಎಲ್ಲಾ ವೀರಗಲ್ಲುಗಳೂ ಬರವಣಿಗೆ ರಹಿತವಾಗಿದ್ದು, ಹೋರಾಡಿದ ವೀರರ ಹೆಸರು, ಕಾಲ, ಯಾರೊಂದಿಗೆ ಹೋರಾಡಿದರು ಎಂಬುದರ ಬಗ್ಗೆ ವಿವರಣೆ ಸಿಗುವುದಿಲ್ಲ. ಆದಾಗ್ಯೂ, ಈ ವೀರಗಲ್ಲುಗಳ ಮೇಲೆ ಕಂಡುಬರುವ ಚಿತ್ರಗಳನ್ನು ಗಮನಿಸಿ, ಇವು ಕ್ರಿ.ಶ. 12 ರಿಂದ 17ನೇ ಶತಮಾನದ ನಡುವಿನ ಕಾಲಕ್ಕೆ ಸೇರಿದವು ಎಂದು ಊಹಿಸಬಹುದು.

ಸುಳ್ವಾಡಿಯ ಜೆಎಸ್ಎಸ್ ಪದವಿ ಪೂರ್ವ ಕಾಲೇಜಿನ ಬಳಿ ಸಾಲಾಗಿ ಜೋಡಿಸಿಟ್ಟ ಕೆಲವು ವೀರಗಲ್ಲುಗಳಿವೆ. ಈ ಕಾಲೇಜು ಪ್ರಾರಂಭವಾದ ಹೊಸದರಲ್ಲಿ ಆಸಕ್ತ ಉಪನ್ಯಾಸಕರಲ್ಲಿ ಕೆಲವರು, ಊರಿನ ಆಸುಪಾಸಿನಲ್ಲಿ ಜನರ ನಿರ್ಲಕ್ಷ್ಯಕ್ಕೆ ಗುರಿಯಾಗಿ ಬಿದ್ದಿದ್ದ ವೀರಗಲ್ಲುಗಳನ್ನು ಸಂರಕ್ಷಿಸುವ ಉದ್ದೇಶದಿಂದ, ಅವುಗಳನ್ನು ತಂದು ಒಂದೆಡೆ ಜೋಡಿಸಿಟ್ಟು ಉಪಕಾರ ಮಾಡಿದ್ದಾರೆ.

ಇಲ್ಲಿ ಒಂದೇ ಕಡೆ ಸಾಲಾಗಿ ನಿಲ್ಲಿಸಲಾದ ಏಳು ವೀರಗಲ್ಲುಗಳನ್ನು ಕಾಣಬಹುದು. ಇವುಗಳಲ್ಲಿ ಮೂರು ವೀರಗಲ್ಲುಗಳು 5x2 ಅಡಿ ಗಾತ್ರದವು; ಎರಡು ವೀರಗಲ್ಲುಗಳು 4x2 ಅಡಿ ಗಾತ್ರದವು; ಉಳಿದೆರಡು 1.5x1.5 ಅಡಿ ಗಾತ್ರದವಾಗಿವೆ. ಈ ಪೈಕಿ ಎಡಭಾಗದಿಂದ ಎರಡನೆಯ ವೀರಗಲ್ಲು ಮೂರು ಹಂತಗಳ ಹುಲಿಬೇಟೆಯ ವೀರಗಲ್ಲಾಗಿದೆ. ಮೂರನೆಯದು ವೀರಮಾಸ್ತಿಕಲ್ಲಾಗಿದ್ದು, ಬಿಲ್ಲು-ಬಾಣ ಹಿಡಿದ ವೀರನನ್ನು ಹಿಂಬಾಲಿಸುವ ಇಬ್ಬರು ಸ್ತ್ರೀಯರ ಉಬ್ಬು ಕೆತ್ತನೆಗಳನ್ನು ಹೊಂದಿದೆ. ನಾಲ್ಕನೆಯದು ಕೂಡ ಎರಡು ಹಂತದ ಹುಲಿಬೇಟೆ ವೀರಗಲ್ಲು. ಐದು ಮತ್ತು ಆರನೆಯ ವೀರಗಲ್ಲುಗಳು ಎರಡು ಹಂತದ ಪಟ್ಟಿಕೆಗಳನ್ನು ಹೊಂದಿವೆ. ಇವುಗಳ ಕೆಳಭಾಗದಲ್ಲಿ ಯುದ್ಧದಲ್ಲಿ ಕಾದಾಡುವ ವೀರನ ಚಿತ್ರಗಳಿದ್ದರೆ, ಮೇಲ್ಭಾಗದಲ್ಲಿ ಸ್ವರ್ಗಸ್ಥನಾದ ವೀರನ ಚಿತ್ರಗಳಿವೆ. ಚಿಕ್ಕ ಗಾತ್ರದ ಒಂದು ಮತ್ತು ಏಳನೇ ವೀರಗಲ್ಲುಗಳು ಯುದ್ಧಕ್ಕೆ ಅಣಿಯಾಗಿರುವ ಯೋಧರ ಕೆತ್ತನೆಗಳನ್ನು ಹೊಂದಿವೆ.

ಸುಳ್ವಾಡಿಯಲ್ಲಿ ಹೊಲವೊಂದರಲ್ಲಿ 4 ಅಡಿ ಎತ್ತರ ಮತ್ತು 3 ಅಡಿ ಅಗಲ ಹೊಂದಿರುವ ಎರಡು ಹಂತದ ಒಂದು ವೀರಗಲ್ಲು ಇದೆ. ಇದಕ್ಕೆ ಆಗಾಗ ಪೂಜೆಯನ್ನೂ ಸಲ್ಲಿಸಲಾಗುತ್ತದೆ. ಇದರಲ್ಲಿ ಹುಲಿಯನ್ನು ವೀರನೊಬ್ಬ ಇರಿಯುತ್ತಿರುವ ಉಬ್ಬು ಶಿಲ್ಪವಿದೆ. ಹುಲಿಯ ಹಿಂಭಾಗದಿಂದ ಎರಡು ನಾಯಿಗಳು ಅದರ ಮೇಲೆ ಎರಗುತ್ತಿರುವ ದೃಶ್ಯ ಕುತೂಹಲಕಾರಿಯಾಗಿದೆ. ಕಲ್ಲಿನ ಮೇಲ್ಭಾಗದ ಬಲ ಪಾರ್ಶ್ವದಲ್ಲಿ ವೀರ ಸ್ವರ್ಗಸ್ಥನಾಗಿರುವುದನ್ನು ಚಿತ್ರಿಸುವ ಶಿಲ್ಪಗಳಿವೆ.

ಅದೇ ಗ್ರಾಮದಲ್ಲಿ ಮರವೊಂದರ ಬುಡಕ್ಕೆ ಆತುಕೊಂಡು ನಿಂತಿರುವ 3 ಅಡಿ ಎತ್ತರ, 2 ಅಡಿ ಅಗಲದ ಅಂಡಾಕಾರದ ಒಂದು ವೀರಗಲ್ಲು ಕಂಡುಬರುತ್ತದೆ. ಇದರಲ್ಲಿರುವ ಚಿತ್ರಗಳು ಅಸ್ಪಷ್ಟವಾಗಿವೆ. ಪ್ರತ್ಯೇಕ ಪಟ್ಟಿಕೆಗಳು ಇಲ್ಲದಿದ್ದರೂ, ಇದು ಮೂರು ಹಂತದ ಚಿತ್ರಗಳನ್ನು ಹೊಂದಿವೆ. ಕೆಳಭಾಗದಲ್ಲಿ ವೀರನೊಬ್ಬ ಯುದ್ಧಭೂಮಿಯಲ್ಲಿ ಹೋರಾಡುವ ದೃಶ್ಯವಿದೆ. ಮಧ್ಯದ ಹಂತದಲ್ಲಿ ವೀರ ಮರಣವನ್ನಪ್ಪಿದ ಯೋಧನನ್ನು ದೇವಕನ್ಯೆಯರು ಕರೆದೊಯ್ಯುತ್ತಿರುವ ಚಿತ್ರವಿದೆ. ಮೇಲಿನ ಹಂತದಲ್ಲಿ ಸ್ವರ್ಗಸ್ಥನಾದ ವೀರ ಮತ್ತು ಸೂರ್ಯ ಚಂದ್ರರ ಕೆತ್ತನೆಗಳಿವೆ.

ಬೀರಂಗಿಬೆಟ್ಟದ ಹಿಂಭಾಗದ ಕುಟ್ಟಕುಳಿ ಅರಣ್ಯದಲ್ಲಿ, ಝರಿಯೊಂದರ ದಡದಮೇಲೆ ಒಂದು ಹುಲಿಬೇಟೆ ವೀರಗಲ್ಲು ಇದೆ. ಹುಲಿಯ ದಾಳಿಯಿಂದ ತನ್ನ ಗ್ರಾಮ ಅಥವಾ ಸಾಕುಪ್ರಾಣಿಗಳನ್ನು ರಕ್ಷಿಸಲು ಹುಲಿಯ ವಿರುದ್ಧ ಹೋರಾಡಿ ಮರಣ ಹೊಂದಿದ ವೀರನ ನೆನಪಿಗಾಗಿ ನೆಟ್ಟ ಕಲ್ಲಿದು. 5 ಅಡಿ ಎತ್ತರ, 3

ಅಡಿ ಅಗಲ ಹೊಂದಿರುವ ಈ ಕಲ್ಲಿನಲ್ಲಿ ಮೂರು ಪಟ್ಟಿಕೆಗಳಿವೆ. ಕೆಳಭಾಗದ ಪಟ್ಟಿಕೆಯ ಕೈಯಲ್ಲಿ ಕತ್ತಿ ಹಿಡಿದು ಹುಲಿಯನ್ನು ಇರಿಯುತ್ತಿರುವ ಪುರುಷನ ಚಿತ್ರವಿದೆ. ಮಧ್ಯದ ಪಟ್ಟಿಕೆಯಲ್ಲಿ ಹುಲಿಯೊಂದಿಗೆ ಹೋರಾಡಿ ಮರಣ ಹೊಂದಿದ ವೀರನನ್ನು ಅಪ್ಸರೆಯರು ಕರೆದೊಯ್ಯುತ್ತಿರುವ ಚಿತ್ರವಿದೆ. ಮೇಲ್ಭಾಗದ ಪಟ್ಟಿಕೆಯಲ್ಲಿ ಶಿವಲಿಂಗ ಮತ್ತು ನಂದಿಯ ಎದುರು ನಿಂತಿರುವ ವೀರನ ಶಿಲ್ಪವಿದೆ. ಬಹಳ ಕಾಲದವರೆಗೂ ದಟ್ಟ ಪೊದೆಗಳ ಮಧ್ಯೆ ಅನಾಥವಾಗಿ ಮಲಗಿ ಬಿದ್ದಿದ್ದ ಈ ಕಲ್ಲನ್ನು, ಇತ್ತೀಚೆಗೆ ದನಕಾಯುವ ಮಂದಿ ಗಿಡ ಗಂಟೆಗಳನ್ನು ಕಡಿದು ಎತ್ತಿ ನಿಲ್ಲಿಸಿದ್ದಾರೆ.

ಆಲೇರಿಕೆರೆ ಸಮೀಪದ ಕಾಡಿನಲ್ಲಿ 5 ಅಡಿ ಎತ್ತರ, 2.5 ಅಡಿ ಅಗಲದ ಮತ್ತೊಂದು ಹುಲಿ ಬೇಟೆ ವೀರಗಲ್ಲು ಇದೆ. ಇದು ಕೂಡ ಮೂರು ಪಟ್ಟಿಕೆಗಳನ್ನು ಹೊಂದಿದೆ. ಕೆಳಗಿನ ಪಟ್ಟಿಕೆಯಲ್ಲಿ ವ್ಯಕ್ತಿಯೊಬ್ಬ ಹುಲಿಯನ್ನು ಆಯುಧದಿಂದ ಇರಿಯುವ ಉಬ್ಬ ಶಿಲ್ಪವಿದೆ. ಕಚ್ಚೆಪಂಚೆ, ಕಾಲ್ಗಡಗ, ತೋಳಪಟ್ಟಿ ಮತ್ತು ಪದಕ ಧರಿಸಿರುವ ಆ ವ್ಯಕ್ತಿಯು ತಲೆಯ ಹಿಂಭಾಗದಲ್ಲಿ ತುರುಬು ಹಾಕಿಕೊಂಡಿದ್ದಾನೆ. ಇದು ಆಗಿನ ಕಾಲದ ಜನರ ವೇಷಭೂಷಣಗಳನ್ನು ಸೂಚಿಸುತ್ತದೆ. ಮಧ್ಯದ ಪಟ್ಟಿಕೆಯಲ್ಲಿ ಹುಲಿಯ ಜೊತೆಗಿನ ಕಾಳಗದಲ್ಲಿ ವೀರ ಮರಣ ಹೊಂದಿದ ವ್ಯಕ್ತಿಯನ್ನು ಇಬ್ಬರು ದೇವತಾ ಸ್ತ್ರೀಯರು ಹಿಡಿದು ನಿಂತಿದ್ದಾರೆ. ಮೇಲಿನ ಪಟ್ಟಿಕೆಯಲ್ಲಿ ನಂದಿ ಮತ್ತು ಲಿಂಗದ ಮುಂದೆ ವೀರ ಕೈಚಾಚಿ ನಿಂತಿರುವ ದೃಶ್ಯವಿದೆ. ಅದರ ಮೇಲೆ ಸೂರ್ಯ–ಚಂದ್ರರ ಕೆತ್ತನೆಗಳಿದ್ದು, ಸೂರ್ಯ, ಚಂದ್ರರಿರುವವರೆಗೆ ವೀರನ ಕೀರ್ತಿ ಅಜರಾಮರವಾಗಿರಲಿ ಎಂಬುದನ್ನು ಇದು ಸಂಕೇತಿಸುತ್ತದೆ. ಅಲ್ಲೇ ಸ್ವಲ್ಪ ದೂರದಲ್ಲಿ 2x2 ಅಡಿ ಗಾತ್ರದ ಒಂದು ಹಂತದ ಇನ್ನೊಂದು ಹುಲಿ ಬೇಟೆ ವೀರಗಲ್ಲು ಕಂಡುಬರುತ್ತದೆ. ಇದರಲ್ಲಿ ವೀರನೊಬ್ಬ ಹುಲಿಯೊಂದಿಗೆ ಹೋರಾಡುತ್ತಿರುವ ದೃಶ್ಯ ಮಾತ್ರ ಇದೆ.

ಮೂಲೆಮಡು ಅರಣ್ಯದಲ್ಲಿ ಅಪ್ರಕಟಿತ ಶಾಸನ ಪತ್ತೆಯಾಗಿರುವ ಸ್ಥಳದಲ್ಲಿ ಒಂದು ವೀರಗಲ್ಲು ಇದೆ. ಅದರ ಬಹುಭಾಗ ಶಿಥಿಲಗೊಂಡು, ತಳಭಾಗ ಮಾತ್ರ ಉಳಿದಿದೆ. ಅದರಲ್ಲಿ ಕುದುರೆಯ ಮೇಲೆ ಕುಳಿತು, ಕತ್ತಿ ಹಿಡಿದು ಯುದ್ಧ ಮಾಡುವ ಯೋಧನ ಕಲಾತ್ಮಕ ಚಿತ್ರವಿದೆ.

ಸಂದನಪಾಳ್ಯ ಗ್ರಾಮದಿಂದ 6 ಕಿಮೀ ದೂರದಲ್ಲಿರುವ ಗರಿಕೆಕಂಡಿ ಅರಣ್ಯದಲ್ಲಿ 5 ಅಡಿ ಎತ್ತರ ಮತ್ತು 2 ಅಡಿ ಅಗಲದ ಒಂದು ಮಾಸ್ತಿಕಲ್ಲು ಕಂಡುಬರುತ್ತದೆ. ಇದು ಎರಡು ಪಟ್ಟಿಕೆಗಳನ್ನು ಹೊಂದಿದ್ದು, ಕೆಳಗಿನ ಪಟ್ಟಿಯಲ್ಲಿ ಸತಿ ಸಹಗಮನಕ್ಕೆ ಹೊರಟ ವೀರ ಮಹಿಳೆಯ ಎರಡು ಪಾರ್ಶ್ವಗಳಲ್ಲಿ ಇಬ್ಬರು ಸ್ತ್ರೀಯರು ನಿಂತಿರುವ ದೃಶ್ಯವಿದೆ. ಮೇಲಿನ ಪಟ್ಟಿಕೆಯಲ್ಲಿ ಪ್ರಾಣಾರ್ಪಣೆ ಮಾಡಿದ ಸತಿಯನ್ನು ಅಪ್ಸರೆಯರು ಸ್ವರ್ಗಕ್ಕೆ ಒಯ್ಯುತ್ತಿರುವ ದೃಶ್ಯವಿದೆ. ಕಲ್ಲಿನ ಮೇಲ್ಭಾಗದಲ್ಲಿ ಸೂರ್ಯ–ಚಂದ್ರರ ಕೆತ್ತನೆಗಳಿವೆ.

## ಸಮಾರೋಪ

ಒಟ್ಟಿನಲ್ಲಿ ಇಲ್ಲಿಯ ಜನರು ಎಂದೂ ಹೇಡಿಗಳಾಗಿ ಬಾಳಿದವರಲ್ಲ; ಊರಿನ ಹಿತಕ್ಕಾಗಿ ತಮ್ಮ ಪ್ರಾಣ ತ್ಯಾಗ ಮಾಡಲು ಕೂಡ ಸಿದ್ಧರಿದ್ದರು ಎಂಬುದು ವೀರಗಲ್ಲುಗಳಿಂದ ತಿಳಿದು ಬಂದರೆ, ಮಾಸ್ತಿಕಲ್ಲುಗಳು ತನ್ನ ಪತಿಯ ಮೇಲೆ ಪತ್ನಿ ಹೊಂದಿದ್ದ ಅಮರಪ್ರೇಮವನ್ನು ಸಾರುವಂತಿವೆ. ಮಾರ್ಟಳ್ಳಿಯ ಸುತ್ತ–ಮುತ್ತ ಯುದ್ಧ ವೀರಗಲ್ಲುಗಳಿಗಿಂತ ಹುಲಿಬೇಟೆಯ ವೀರಗಲ್ಲುಗಳೇ ಹೆಚ್ಚಾಗಿ ಪತ್ತೆಯಾಗಿರುವುದನ್ನು ಅವಲೋಕಿಸಬಹುದಾಗಿದೆ. ಇದು ಬೆಟ್ಟ ಗುಡ್ಡಗಳಿಂದ ಕೂಡಿದ ಪ್ರದೇಶವಾದ ಕಾರಣ, ಅನ್ಯರ ದಾಳಿಗಿಂತ ಕಾಡುಪ್ರಾಣಿಗಳ ಹಾವಳಿಯೇ ಇಲ್ಲಿ ಹೆಚ್ಚಾಗಿತ್ತು ಎಂಬ ಅಂಶ ತಿಳಿದುಬರುತ್ತದೆ. ಇಂದಿಗೂ ಚಿರತೆ, ಕತ್ತೆಕಿರುಬ, ಕಾಡುನಾಯಿ, ಕಾಡುಬೆಕ್ಕು ಮುಂತಾದ ಕಾಡುಪ್ರಾಣಿಗಳು ರಾತ್ರಿ ಹೊತ್ತು ಊರೊಳಗೆ ನುಗ್ಗಿ ಸಾಕುಪ್ರಾಣಿಗಳನ್ನು ಬೇಟೆಯಾಡುವ ಘಟನೆಗಳು ಆಗೊಮ್ಮೆ ಈಗೊಮ್ಮೆ ಸಂಭವಿಸುತ್ತಿರುತ್ತವೆ.

ಈ ಪ್ರದೇಶದಲ್ಲಿ ಇದುವರೆಗೆ ದೊರೆತಿರುವ ಶಾಸನ ಮತ್ತು ವೀರಗಲ್ಲುಗಳು ಮಾರ್ಟಳ್ಳಿ ಗ್ರಾಮದ ಐತಿಹಾಸಿಕ, ಸಾಮಾಜಿಕ, ರಾಜಕೀಯ ಮತ್ತು ಧಾರ್ಮಿಕ ಮಗ್ಗುಲುಗಳ ಪರಿಚಯವನ್ನು ಮಾಡಿಕೊಡುತ್ತವೆ. ಮಾತ್ರವಲ್ಲದೆ, ಅನೇಕ ವೀರಗಲ್ಲುಗಳು ಮತ್ತು ಒಂದು ಶಾಸನಗಲ್ಲು ಊರಾಚೆ ಅರಣ್ಯದ ಬಯಲುಗಳಲ್ಲಿ ಕಂಡುಬರುವುದನ್ನು ಗಮನಿಸಿದಾಗ, ಹಿಂದೆ ಆ ಸ್ಥಳಗಳು ಜನವಸತಿ ಪ್ರದೇಶಗಳಾಗಿದ್ದವು ಎಂದು ವಿದಿತವಾಗುತ್ತದೆ.

## ಕೊನೆ ಟಿಪ್ಪಣಿಗಳು

1. ತಿಪ್ಪೇರುದ್ರಸ್ವಾಮಿ ಎಚ್., ಕರ್ನಾಟಕ ಸಂಸ್ಕೃತಿ ಸಮೀಕ್ಷೆ, 1992, ಪು. 233
2. ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, 2002 ಪು. 15
3. ಅದೇ, ಪು. 13
4. ಎಫಿಗ್ರಾಫಿಯ ಕರ್ನಾಟಕ, ಸಂಪುಟ ನಾಲ್ಕು, 1975 ಪು. 452
5. ಅದೇ, ಪು. 453
6. ಅದೇ, ಪು. 453, 454
7. ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, 2002 ಪು. 276
8. ತಿಪ್ಪೇರುದ್ರಸ್ವಾಮಿ ಎಚ್., ಕರ್ನಾಟಕ ಸಂಸ್ಕೃತಿ ಸಮೀಕ್ಷೆ, 1992, ಪು. 233
9. ಅದೇ, ಪು. 243
10. ಅದೇ, ಪು. 250

## ಪರಾಮರ್ಶನ ಗ್ರಂಥಗಳು


1. ಚಾಮರಾಜನಗರ ಜಿಲ್ಲಾ ಗ್ಯಾಸೆಟಿಯರ್, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು, 2015
2. ಕನ್ನಡ ವಿಷಯ ವಿಶ್ವಕೋಶ, ಮೈಸೂರು ವಿಶ್ವವಿದ್ಯಾನಿಲಯ, 2006
3. ಗೋಪಾಲ ಬಾ.ರಾ., ಕನ್ನಡ ಶಾಸನಗಳು, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, 2004